## ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮೈಸೂರು

## ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯ

**ಮೈಸೂರು, ಆ.22 :** ನಗರದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಂದ ಕಾಲೇಜಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಆಯೋಜಿಸಲಾಗಿತ್ತು.



ರಾ.ಸೇ.ಯೋ. ಅಧಿಕಾರಿ ಡಾ.ಕಂಚಿನಕೆರೆ ಗೋವಿಂದೇಗೌಡ ಅವರ ನೇತೃತ್ವದಲ್ಲಿ ಎನ್‌ಎಸ್‌ಎಸ್ ಸ್ವಯಂಸೇವಕಿಯರು ಕಾಲೇಜಿನ ಸುತ್ತಮುತ್ತ ಬೆಳೆದಿದ್ದ ಪಾರ್ತೇನಿಯಂ ಹಾಗೂ ಇತರೆ ಮುಳ್ಳಿನ ಗಿಡಗಂಟಿಗಳನ್ನು ಕಿತ್ತು ಶುಚಿಗೊಳಿಸಿದರು. ಬಿಸಾಡಲಾಗಿದ್ದ ಕಾಗದಗಳು, ಪ್ಲಾಸ್ಟಿಕ್ ಹಾಳೆಗಳನ್ನು ಪೊರಕೆಯಿಂದ ಗುಡಿಸಿ ಪರಿಸರವನ್ನು ಹಸನುಗೊಳಿಸಿದರು.



ಜೊತೆಗೆ, ಕಾಲೇಜು ಕಟ್ಟಡದಿಂದ ಸ್ವಲ್ಪ ದೂರದಲ್ಲಿ ಹಲವಾರು ತಿಂಗಳಿಂದ ಬೃಹತ್ ಪ್ರಮಾಣದಲ್ಲಿ ರಾಶಿಬಿದ್ದು ಕೊಳೆತು ಪರಿಸರಕ್ಕೆ ಹಾನಿ ಮಾಡುತ್ತಿದ್ದ ಪ್ಲಾಸ್ಟಿಕ್ ತ್ಯಾಜ್ಯ ಹಾಗೂ ಅರೆಬೆಂದ ಕಸ ಕಡ್ಡಿಗಳನ್ನು, ಪಿಕಾಸಿ- ಗುದ್ದಲಿ, ಕುಡುಗೋಲುಗಳನ್ನು ಬಳಸಿ ಶುಚಿಗೊಳಿಸಲಾಯಿತು. ಮಣ್ಣಿನಿಂದ ಬೇರ್ಪಡಿಸಿದ ಕಸವನ್ನು ನಗರಪಾಲಿಕೆಯ ಕಸ ತುಂಬುವ ಕಂಟೇನರ್‌ಗೆ(ಕಸ ತಂಬುವ ತೊಟ್ಟಿ) ತುಂಬಲಾಯಿತು. ಬಳಿಕ ಕಾಲೇಜು ಒಳ ಆವರಣದಲ್ಲಿಯೂ ಕಸಕಡ್ಡಿಗಳನ್ನು ತೆಗೆದು ಶುಚಿಗೊಳಿಸಲಾಯಿತು.





ಈ ಸಂದರ್ಭದಲ್ಲಿ ಮಾತನಾಡಿದ ಕಾರ್ಯಕ್ರಮಾಧಿಕಾರಿ ಡಾ.ಕಂಚಿನಕೆರೆ ಗೋವಿಂದೇಗೌಡ, ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್‌ನ್ನು ಸರ್ಕಾರ ನಿಷೇಧಿಸಿದ್ದರೂ ಬಳಕೆ ಮಾಡುತ್ತಿರುವುದು ಸರಿಯಲ್ಲ. ಎಲ್ಲೆಂದರಲ್ಲಿ ಬಿಸಾಡುವುದರಿಂದ ನೀರು ನಿಂತು ಸೊಳ್ಳೆ ಉತ್ಪತ್ತಿಯಾಗುತ್ತವೆ. ಮಣ್ಣಿನಲ್ಲಿ ಪ್ಲಾಸ್ಟಿಕ್ ಕರಗದ

ಕಾರಣ ಮನುಕುಲದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆದ್ದರಿಂದ ವಿದ್ಯಾರ್ಥಿನಿಯರು ಈ ಬಗ್ಗೆ ಎಚ್ಚರವಹಿಸಬೇಕು, ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡಬೇಕು ಎಂದು ಸಲಹೆ ನೀಡಿದರು.

ಪರಿಸರ ಸಂರಕ್ಷಣೆಯಲ್ಲಿ ಶುಚಿತ್ವದ ಪಾತ್ರ ಮಹತ್ವದ್ದಾಗಿದೆ. ಆರೋಗ್ಯಕರ ಪರಿಸರದಿಂದ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ಆದ್ದರಿಂದ ಶುಚಿತ್ವ ಮತ್ತು ಅದರ ಅಗತ್ಯತೆ ಬಗ್ಗೆ ಪ್ರತಿಯೊಬ್ಬರಲ್ಲೂ ಅರಿವು ಮೂಡಬೇಕು. ಕಾಲೇಜು ವಿದ್ಯಾರ್ಥಿಗಳು ಈ ಬಗ್ಗೆ ಇತರರಲ್ಲೂ ಜಾಗೃತಿ ಮೂಡಿಸಬೇಕು ಎಂದು ತಿಳಿ ಹೇಳಿದರು.

ಸ್ವಚ್ಛತಾ ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕ ಎಂ.ಎಸ್.ನಾಗಣ್ಣ, ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಎಚ್.ಎನ್.ಪ್ರಸಾದ್, ಕನ್ನಡ ಉಪನ್ಯಾಸಕ ಪಂಜನಹಳ್ಳಿ ಸ್ವಾಮಿ, ಇಂಗ್ಲಿಷ್ ಉಪನ್ಯಾಸಕ ಬಿ.ರಾಜು, ರಾ.ಸೇ.ಯೋ ಘಟಕದ ಮತ್ತೊಬ್ಬ ಅಧಿಕಾರಿ ಪ್ರೊ.ರೇಖಾ ಮ್ಯಾಥ್ಯೂ, ಸ್ವಯಂ ಸೇವಕಿಯರಾದ ಮೇಘ ಕೆ., ಐಶ್ವರ್ಯ, ಸಂಗೀತ, ಪ್ರೆಸಿಲ್ಲ ಪ್ರಮೋದ್ ಸೇರಿದಂತೆ ಹಲವಾರು ಮಂದಿ ಪಾಲ್ಗೊಂಡಿದ್ದರು.